

# ಮೂಗಿನ ತೋರಣ

ಪೆದ್ದ ಗಂಡ. ಗುಂಡಣ್ಣನ ಹೆಂಡತಿ ರಂಗಮ್ಮ ಜಾಣೆ. ಮನೆಯ ಹತ್ತಿರದಲ್ಲೆ ಸಾಗುವಳಿ ಜಮೀನು. ಆದರೆ ಗುಂಡ ಸೋಮಾರಿ. ಮೈ ಬಗ್ಗಿಸಿ ದುಡಿಯಲಾರ. ಜಮೀನಿನಲ್ಲಿ ನೀರಿನ ಸೌಕರ್ಯಕ್ಕಾಗಿ ಒಂದು ಬಾವಿಯನ್ನೂ ತೋಡಿಸಿದ್ದಳು ರಂಗಮ್ಮ. ಗುಂಡ ಮಾತ್ರ ಜಮೀನು ಕಡೆ ತಲೆ ಹಾಕುತ್ತಿರಲೇ ಇಲ್ಲ. ರಂಗಮ್ಮ ತನ್ನ ಜಾಣತನದಿಂದ ಹೇಗೊ ಸಂಸಾರ ತೂಗಿಸಿಕೊಂಡು ಹೋಗುತ್ತಿದ್ದಳು. ಗುಂಡನಿಗೆ ಹೇಗಾದರೂ ಮಾಡಿ ಬುದ್ಧಿ ಕಲಿಸಬೇಕೆಂದು ರಂಗಮ್ಮ ಯೋಚಿಸುತ್ತಿದ್ದಳು.

ಒಂದು ದಿನ ರಾತ್ರಿ ಗುಂಡಣ್ಣ ಮತ್ತು ರಂಗಮ್ಮ ಊಟ ಮಾಡಿ ಮಂಚದ ಮೇಲೆ ಕುಳಿತಿದ್ದರು. ರಂಗಮ್ಮ ತನ್ನ ಗಂಡನಿಗೆ ಎಲೆ– ಅಡಿಕೆ ಸುತ್ತಿ ಕೊಡುತ್ತಿದ್ದಳು. ಹಿಂದಿನ ಪಡಸಾಲೆಯಲ್ಲಿ ಏನೋ ಸದ್ದಾದುದು ರಂಗಮ್ಮನ ಕಿವಿಗೆ ಬಿದ್ದಿತು. ಯಾರೋ ನಡೆದಂತೆ, ಯಾರೋ ಪಿಸುಪಿಸು ಮಾತಾಡಿದಂತೆ. ರಂಗಮ್ಮನಿಗೆ ಅರ್ಥವಾಯಿತು ಬಂದವರು ಕಳ್ಳರೆಂದು! ಆದರೆ ರಂಗಮ್ಮ ಹೆದರಲಿಲ್ಲ.

ಕಳ್ಳರಿಗೆ ಕೇಳಿಸಲೆಂದೇ ಸ್ವಲ್ಪ ಜೋರಾಗಿಯೇ ಹೇಳಿದಳು. ‘ನಿಮಗೊಂದು ಮಾತು ಹೇಳೋದಕ್ಕೇ ಮರೆತಿದ್ದೆ. ನಮ್ಮ ಮನೇಲಿ ಇರೋ ಬಂಗಾರ – ಬೆಳ್ಳಿಯ ಒಡವೆ, ನಗ ನಾಣ್ಯದ ವಿಚಾರ. ಅವನ್ನೆಲ್ಲ ಎಲ್ಲಿ ಇಟ್ಟಿದ್ದೀನಿ ಗೊತ್ತ? ಯಾರಿಗೂ ಹೇಳಬೇಡಿ. ಕಳ್ಳರ ಕಾಟ ಹೆಚ್ಚಾಗಿದೆ. ನಮ್ಮ ಮನೆ ಹಿಂದಿನ ಜಮೀನಲ್ಲಿ ನೆಲದ ಅಡಿಯಲ್ಲಿ ಅಲ್ಲಲ್ಲಿ ಹುದುಗಿಸಿಟ್ಟಿದ್ದೀನಿ. ಯಾರಿಗೂ ಹೇಳಬೇಡಿ. ತಿಳೀತ?’

ಕಳ್ಳರ ಮೀಸೆಯಜಮಾನ ತನ್ನ ಇಪ್ಪತ್ತು ಸಹಚರರೊಂದಿಗೆ ಬಂದಿದ್ದ! ಎಲ್ಲ ಕೇಳಿಸಿಕೊಂಡು ಬಿಟ್ಟ. ತನ್ನ ಬಂಟರಿಗೆ ಸೂಚನೆ ನೀಡಿದ. ಒಡೆಯನ ಸೂಚನೆಯಂತೆ ಅಂದು ರಾತ್ರಿ ಕಳ್ಳರೆಲ್ಲ ರಂಗಮ್ಮನ ಜಮೀನಿನಲ್ಲಿ ಹಾರೆ, ಪಿಕಾಸಿ, ಮಂಕ್ರಿಗಳೊಂದಿಗೆ ಹಾಜರಾದರು. ಒಡೆಯನ ಅಪ್ಪಣೆಯಂತೆ ಒಂದಡಿ ಬಿಡದಂತೆ ಜಮೀನೆಲ್ಲವನ್ನೂ ಅಗೆದು ಅಗೆದು ಹಾಕಿದರು. ಬೆಳಗಾಗುವ ಸೂಚನೆ ಕಂಡಿತು. ಒಡವೆ ಮಾತ್ರ ಸಿಗಲಿಲ್ಲ. ಸಿಟ್ಟಿನಿಂದ ಕಳ್ಳರೊಡೆಯ ತನ್ನ ತಂಡದೊಂದಿಗೆ ಹಿಂದಿರುಗಿದ.

ಮತ್ತೆರೆಡು ದಿನ ಕಳೆದಿರಬಹುದು. ರಂಗಮ್ಮ ಒಡವೆಗಳನ್ನೆಲ್ಲ ಎಲ್ಲಿಟ್ಟಿದ್ದಾಳೆ ಎಂದು ತಿಳಿದುಕೊಳ್ಳಲೇ ಬೇಕೆಂದು ಕಳ್ಳರ ಒಡೆಯ ಮತ್ತೆ ರಾತ್ರಿ ಬಾಗಿಲ ಹಿಂದೆ ತನ್ನ ಸಹಚರರೊಂದಿಗೆ ಅಡಗಿ ಕುಳಿತ. ರಂಗಮ್ಮ ಕಳ್ಳರನ್ನು ನಿರೀಕ್ಷಿಸಿದ್ದಳು. ಅಂದು ಕೂಡ ರಂಗಮ್ಮ ತನ್ನ ಗಂಡನಿಗೆ ಎಲೆ ಅಡಿಕೆ ಸುತ್ತಿಕೊಡುತ್ತ ಹೇಳಿದಳು.

‘ರೀ ನಮ್ಮ ಒಡವೆ, ನಗ, ನಾಣ್ಯ ಜಮೀನಿನಲ್ಲಿ ಹುದಿಗಿಸಿಲ್ಲ. ಸರಿಯಾಗಿ ಕೇಳಿಸಿಕೊಳ್ಳಿ, ಯಾರಿಗೂ ಹೇಳಬೇಡಿ, ನಮ್ಮ ಜಮೀನಿನ ಬಾವಿ ಇದೆಯಲ್ಲ, ಅದರ ನೀರಿನಲ್ಲಿ ಇಟ್ಟಿದ್ದೀನಿ. ಯಾರಿಗೂ ಹೇಳಬೇಡಿ. ಇತ್ತೀಚೆಗೆ ಕಳ್ಳರ ಕಾಟ ಹೆಚ್ಚಾಗಿದೆ’

ಬಾಗಿಲ ಹಿಂದೆ ಅವಿತುಕೊಂಡಿದ್ದ ಕಳ್ಳರೊಡೆಯನ ಕಣ್ಣು ಚುರುಕಾದವು. ತನ್ನ ಸಹಚರರನ್ನೆಲ್ಲ ಕರೆದುಕೊಂಡು ಜಮೀನಿನ ಬಾವಿಯ ಬಳಿಗೆ ಬಂದ. ಬಾವಿಯಿಂದ ನೀರಳೆಯಲು ಕೊಡ–ಬಿಂದಿಗೆಗಳನ್ನೂ ತಂದರು. ಬಾವಿಯ ನೀರನ್ನೆಲ್ಲ ಸೇದಿಸೇದಿ ಹೊರಗೆ ಚೆಲ್ಲಲು ಆಜ್ಞಾಪಿಸಿದ. ಅದರಂತೆ ಕಳ್ಳರೆಲ್ಲ ಸೇರಿ ಬಾವಿಯಿಂದ ನೀರು ಸೇದಿ ಜಮೀನಿನಲ್ಲೆಲ್ಲ ಚೆಲ್ಲಿದರು. ಬಾವಿಯಿಂದ ಸಾಕಷ್ಟು ನೀರು ಹೊರಹೋಯಿತು. ಜಮೀನಿಗೆಲ್ಲ ನೀರಾಯಿತು. ಎರಡು ದಿನಗಳ ಹಿಂದೆ ಜಮೀನಿನ ಮಣ್ಣನ್ನೆಲ್ಲ ಅಗೆಯಲಾಗಿತ್ತು. ಈಗ ನೀರೂ ಹಾಕಲ್ಪಟ್ಟು ಎಲ್ಲ ಕಡೆ ಕೆಸರಾದಂತಾಯಿತು. ಬೆಳಗಿನ ತನಕ ಬಾವಿಯ ನೀರನ್ನು ಸೇದಿ ಹೊರಚೆಲ್ಲಿದರೂ ಚಿನ್ನದ ಒಡವೆ ಸಿಗಲಿಲ್ಲ, ಕಳ್ಳರೊಡೆಯ ಸಿಟ್ಟಿನಿಂದ ತನ್ನ